ಎಂದು ಹೇಳಿದ್ದೇವೆ. ಆ ಬ್ಯಾರೇಜ್‌ನ್ನು ಸರಿಯಾಗಿ ಮಾಡಿ ಆ ಮೂಲದಿಂದ ನೀರನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು ಎಂದು ಹೇಳಿ ಅಧಿಕಾರಿಗಳಿಗೆ ತಿಳಿಸಲಾಗಿದೆ. ಇದು ಪೈಪ್ಡ್ ಸಪ್ಲೈ ಆದ್ದರಿಂದ ಎ.ಯು ಡಬ್ಲಿ ಎಸ್ ಅಲ್ಲಿ ಕೇಂದ್ರ ಸರ್ಕಾರ ಕೊಡುವಂತಹ 50 ಪರ್ಸೆಂಟ್ ಗ್ರಾ ್ಯಂಟ್ ಮತ್ತು ರಾಜ್ಯ ಸರ್ಕಾರ ಕೊಡುವಂತಹ 50 ಪರ್ಸೆಂಟ್ ಗ್ರಾ ್ಯಂಟ್ ಎರಡೂ ಸೇರಿ ಆ ಪೈವ್ಡ್ ವಾಟರ್ ಸಪ್ಲೈ ಮೂಲಕ ಕೊಡುವಂತಹ ನೀರನ್ನು ಕೊಡಲು ಈ ಸೊರಬ ಪಟ್ಟಣವನ್ನೂ ಸಹ 1997-98ನೇ ಸಾಲಿನಲ್ಲಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟು ಅಲ್ಲಿನ ನೀರಿನ ತೊಂದರೆ ಏನು ಇದೆ ಅದಕ್ಕೆ ಸಧ್ಯಕ್ಕೆ ಅಲ್ಲಿ ಇನ್ನೂ ಕೆಲವು ಕೊಳವೆ ಬಾವಿಗಳನ್ನು ಹಾಕಿ ಅಲ್ಲಿಗೆ ನೀರನ್ನು ಕೊಡುವಂತಹ ಕಾರ್ಯವನ್ನು ಮಾಡುತ್ತೇವೆ.

ಉಪಾಧ್ಯಕ್ಷರು : ಮಾನ್ಯ ಡಿ.ಎಸ್. ಮಾದಪ್ಪನವರ ಪ್ರಶ್ನೆಗೆ ಸಮಯ ಕೇಳಿದ್ದಾರೆ. ಮತ್ತು ಮಾನ್ಯ ಕರಡಿ ಸಂಗಣ್ಣ ಅವರ ಪ್ರಶ್ನೆಗೂ ಸಹ ಸಮಯ ಕೇಳಿದ್ದಾರೆ. ಮಾನ್ಯ ಮಂತ್ರಿಗಳು ಉತ್ತರ ಕಳುಹಿಸಿಕೊಡುತ್ತಾರೆ.

ವಿಷಯ : ಹುಬ್ಬಳ್ಳಿ ಟೌನಿನ ಮಹೇದೇವ ಜವಳಿ ಗಿರಣಿ ಪುನಶ್ಚೇತನ

239 (1902)-ಶ್ರೀ ಜಗದೀಶ್ ಶೆಟ್ಟರ್, (ಹುಬ್ಬಳ್ಳಿ ಗ್ರಾಮಂತರ) : ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿಯ ಮಹದೇವಿ ಜವಳಿ ಗಿರಣಿ ಮುಚ್ಚಿ ಹೋಗುವಂತಹ ಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಅದಕ್ಕೆ ಕಾರಣಗಳೇನು?

ಆ) ಸದರಿ ಗಿರಣಿಯ ಕಾರ್ಮಿಕ ವರ್ಗಕ್ಕೆ ಕಳೆದ ಕೆಲವು ತಿಂಗಳಿಂದ ವೇತನ ನೀಡದಿರುವುದರಿಂದ ಹಾಗೂ ಗಿರಣಿಯ ಯಂತ್ರಗಳನ್ನು ಹಂತ ಹಂತವಾಗಿ ಮಾರಾಟ ಮಾಡುತ್ತಿರುವುದು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) 1996-97ನೇ ಸಾಲಿನಲ್ಲಿ ಈ ಗಿರಣಿಯ ಪುನಶ್ಚೇತನದ ಸಲುವಾಗಿ ಹಣ ಬಿಡುಗಡೆ ಮಾಡಲಾಗಿದೆಯೇ? ಎಷ್ಟು ಬಿಡುಗಡೆ ಮಾಡಲಾಗಿದೆ ಹಾಗೂ ಗಿರಣಿ ಪುನಶ್ಚೇತನಕ್ಕೆ ಇಲ್ಲಿಯವರೆಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಎಸ್. ಪಾಟೀಲ್ (ಜವಳಿ ಸಚಿವರು)

ಅ) ಹೌದು. ಇದಕ್ಕೆ ಕಾರಣಗಳು ಈ ಕೆಳಗಿನಂತಿವೆ :

1) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಿಂದ ವಿದ್ಯುತ್ ಕಡಿತ, ವಿದ್ಯುತ್ ಕಡಿತವಲ್ಲದೆ ಅನುಕೂಲಕ್ಕೆ ವಿದ್ಯುತ್ ಕಡಿತ

2) ಹಳೆಯ ಯಂತ್ರೋಪಕರಣಗಳಿಂದ ಕಡಿಮೆ ಉತ್ಪಾದನೆ.

3) ಉತ್ಪಾದನೆಗೆ ಹೋಲಿಸಿದಾಗ ಹೆಚ್ಚು ಕಾರ್ಮಿಕ ಭತ್ಯೆ.

4) ದುಡಿಯುವ ಬಡವಾಳದ ತೀವ್ರ ಕೊರತೆ ಹಾಗೂ ಆಧುನೀಕರಣಕ್ಕೆ ಬಂಡವಾಳದ ಕೊರತೆ.

ಆ) ಮೇಲಿನ ಕಾರಣದಿಂದ ಮಹದೇವ ಜವಳಿ ಗಿರಣಿಯ ನಿರ್ದೇಶಕರ ಮಂಡಳಿ ತೀರ್ಮಾನಿಸಿದಂತೆ ಉತ್ಪಾದನಾ ಚಟುವಟಿಕೆಯನ್ನು ಮಾರ್ಚ್ 96ರಿಂದ ಜೂನ್ 96ರವರೆಗೆ ಸ್ಥಗಿತಗೊಳಿಸಲಾಗಿತ್ತು. ಈ 4 ತಿಂಗಳುಗಳ ವೇತನವನ್ನು ಜೂನ್ 96ರಂದು ಬಟವಾಡೆ ಮಾಡಲಾಗಿರುತ್ತದೆ.

ಇ) ಎಂ.ಎಸ್.ಟಿ.ಸಿ. (ಭಾರತ ಸರ್ಕಾರದ ಒಂದು ಉದ್ಯಮ ಮೂಲಕ ಬಿ. ಐ.ಎಫ್.ಆರ್.ಕೇಸ್ .606:95 ದಿನಾಂಕ : 8.81996ರ ಆದೇಶದಂತೆ ಸರ್ಕಾರದ ಆದೇಶ ಸಂಖ್ಯೆ : ಸಿಐ: 21 ಸಿಟಿಹೆಚ್:93 ದಿನಾಂಕ:21.2.1995ರಂತೆ ಹಳೆಯ ನಿರುಪಯೋಗಿ ಯಂತ್ರೋಪಕರಣಗಳು ಹಾಳಾಗಿ ಹೋಗುತ್ತಿದ್ದುದರಿಂದ ಮಾರಾಟ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

1996-97ನೇ ಸಾಲಿನಲ್ಲಿ ಗಿರಣಿಯ ಪುನಃ ಶ್ಚೇತನಕ್ಕೆ ಎಂದು ಯಾವುದೇ ಹಣ ಬಿಡುಗಡೆಯಾಗಿಲ್ಲ. ಆದರೆ 1996-97ನೇ ಸಾಲಿನಲ್ಲಿ ವಿವಿಧ ಉದ್ದೇಶಗಳಿಗೆ ರೂ. 181.85 ಲಕ್ಷ ಬಿಡುಗಡೆಯಾಗಿದೆ. ಆದರ ವಿವರ ಈ ಕೆಳಗಿನಂತಿದೆ:

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಸರ್ಕಾರದ ಆದೇಶ ಮತ್ತು ದಿನಾಂಕ	ಬಿಡುಗಡೆಯಾದ ಮೊತ್ತ	ಖರ್ಚಾದ ಹಣ	ಉದ್ದೇಶ
1.	ಸಿಐ:549:ಸಿಟಿಹೆಚ್:95 ದಿನಾಂಕ:25.3.1996	17.33	17.33	ಪಿ.ಎಫ್ ಮತ್ತು ಇ.ಎಸ್.ಐ.ಬಾಕಿ.
2.	ಸಿಐ:549:ಸಿಟಿಹೆಚ್:95 ದಿನಾಂಕ:30.5.96	30.00	30.00	ಮಾರ್ಚ್-ಏಪ್ರಿಲ್ 1996ರ ವೇತನ ಪಿ. ಎಫ್,ಇಎಸ್ಐ ಮತ್ತು ಗ್ರಾಚ್ಯೂಟಿ.
3.	ಸಿಐ.549:ಸಿಟಿಹೆಚ್:95 ದಿನಾಂಕ: 19.10.1996	125.00	125.00	ಹತ್ತಿ ಖರೀದಿ ಗ್ರಾಚ್ಯೂಟಿ ಕೆ.ಇ.ಬಿ.ಬಿಲ್ ಪಾವತಿಗಳು.
4.	ಸಿ.ಐ:549:ಸಿಟಿಹೆಚ್:95 ದಿನಾಂಕ: 17.6.1996	9.50	9.50	1995-96ರ ನೌಕರರ ಬೋನಸ್ ಪಾವತಿಗಾಗಿ.

ಮಹದೇವ ಜವಳಿ ಗಿರಿಣಿಯ ಪ್ರಕರಣವು ಬಿಐಎಫ್ಆರ್ ಎದುರಿಗೆ ಪ್ರಕರಣ ಸಂಖ್ಯೆ:606:95ಯೆಂದು ದಾಖಲಾಗಿದೆ. ಬಿ.ಐ.ಎಫ್.ಆರ್‌ದ ನಿರ್ಣಯದಂತೆ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಅವರು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಹುಬ್ಬಳ್ಳಿ ಮಹದೇವ ಜವಳಿ ಗಿರಣಿ ಮುಚ್ಚಿ ಹೋಗುವಂತಹ ಪರಿಸ್ಥಿತಿಯಲ್ಲಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಅದು ಮುಚ್ಚಿ ಹೋಗುವಂತಹ ಪರಿಸ್ಥಿತಿಗೆ ಕಾರಣ ಹೇಳಿದ್ದಾರೆ. ಹಳೆಯ ಯಂತ್ರೋಪಕರಣಗಳಿಂದ ಕಡಿಮೆ ಉತ್ಪಾದನೆ. ಮತ್ತು ದುಡಿಯುವ ಬಡವಾಳಕ್ಕೆ ತೀವ್ರವಾದ ಕೊರತೆ. ಮತ್ತು ಆಧುನೀಕರಣಕ್ಕೆ ಬಂಡವಾಳದ ಕೊರತೆ ಎಂದು ಹೇಳಿದ್ದಾರೆ. 1996-97ನೇ ಸಾಲಿಗೆ ಈ

ಗಿರಣಿ ಪುನಶ್ಚೇತನಕ್ಕೆ ಹಣ ಏನಾದರೂ ಬಿಡುಗಡೆ ಮಾಡಲಾಗಿದೆಯೇ ಎಂದು ಕೇಳಿದ್ದಕ್ಕೆ ಪುನಶ್ಚೇತನಕ್ಕೆ ಅಲ್ಲ ಬೇರೆ ರೀತಿಯಿಂದ 181.85 ಲಕ್ಷ ಬಿಡುಕಗಡೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಆ ಗಿರಣಿ ಪುನಜಶ್ಚೇತನಕ್ಕೆ ಯಾವ ಹಣವನ್ನು ಬಿಡುಗಡೆ ಮಾಡಿಲ್ಲ ಎಂದು ಹೇಳಿದ್ದಾರೆ. ಈ ಮಹದೇವ ಜವಳಿ ಗಿರಣಿ ನೂರು ವರ್ಷದ ಹಳೆಯ ಗಿರಣಿ. ಸರ್ಕಾರ ಇದರ ಬಗ್ಗೆ ಹೆಚ್ಚಿನ ಕಾಳಜಿಯನ್ನು ತೆಗೆದುಕೊಳ್ಳುತ್ತಿಲ್ಲ. ಇಂದಿನ ಬಜೆಟ್‌ನಲ್ಲಿ ಮಾನ್ಯ ಆರ್ಥಿಕ ಸಚಿವರು ಒಂದು ಮಾತು ಹೇಳಿದ್ದಾರೆ. ಜವಳಿ ಕೈಗಾರಿಕೆಗೆ ಅನುಕೂಲವಾಗುವಂತೆ ಹುಬ್ಬಳ್ಳಿ-ಧಾರವಾಡ ಪ್ರದೇಶದಲ್ಲಿ ಸಮಗ್ರವಾಗಿ ಮೂಲಭೂತವಾದ ಸೌಲಭ್ಯವನ್ನು ಕಲ್ಪಿಸಲಾಗುವುದು ಎಂದು ಒಂದು ಕಡೆ ಹೇಳುತ್ತಾರೆ. ಆದರೆ ಇವತ್ತು ಹುಬ್ಬಳ್ಳಿಯಲ್ಲಿ ಅತ್ಯಂತ ದೊಡ್ಡದಾದ ಜವಳಿಗಿರಣಿ ಮುಚ್ಚಿಹೋಗುವಂತಹ ಪರಿಸ್ಥಿತಿ ಇದೆ. ಅದೂ ಈ ಗಿರಣಿ ಸರ್ಕಾರದ ಆಡಳಿತದಲ್ಲಿ ಇದೆ. ಆದ್ದರಿಂದ ಈ ಒಂದು ಜವಳಿ ಗಿರಣಿಯನ್ನು ಉಳಿಸುವ ಸಲುವಾಗಿ ಅದನ್ನು ಪುನಶ್ಚೇತನ ಮಾಡುವ ಸಲುವಾಗಿ ಯಾವ ಕ್ರಮಗಳನ್ನು ಕೈಗೊಳ್ಳುತ್ತಾರೆ ಎನ್ನುವ ಬಗ್ಗೆ ಯಾವುದೇ ಒಂದು ಸ್ಪಷ್ಟ ಮಾಹಿತಿಯನ್ನು ಮಾನ್ಯ ಮಂತ್ರಿಗಳು ಕೊಟ್ಟಿಲ್ಲ. ಸಾವಿರಾರು ಜನ ನೌಕರರು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಸಾವಿರಾರು ಕುಟುಂಬ ಈ ಒಂದು ಜವಳಿಗಿರಣಿ ಮೇಲಿದೆ. ಧಾರವಾಡ ಜಿಲ್ಲೆಯಲ್ಲಿ ಈ ಒಂದು ಗಿರಣಿಯನ್ನು ಪುನಶ್ಚೇತನ ಮಾಡಿದರೆ ಆದ್ದರಿಂದ ಹತ್ತಿ ಬೆಳಗಾರರಿಗೆ ಬಹಳಷ್ಟು ಅನುಕೂಲವಾಗುತ್ತದೆ. ಆದ್ದರಿಂದ ಮಾನ್ಯ ಸಚಿವರು ಇದರ ಪುನಶ್ಚೇತನದ ಬಗ್ಗೆ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾರೆ ಎನ್ನುವ ಬಗ್ಗೆ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎನ್. ಬಚ್ಚೇಗೌಡ : (ಜವಳಿ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೇ, ಈ ಒಂದು ಜವಳಿ ಗಿರಣಿ 1895ರಲ್ಲಿ ಪ್ರಾರಂಭವಾಗಿರತಕ್ಕಂಥಾದ್ದು. ಸುಮಾರು ನೂರು ವರ್ಷಗಳಿಗೂ ಮೇಲ್ಪಟ್ಟು ಈ ಒಂದು ಗಿರಣಿ ಕೆಲಸ ಮಾಡಿಕೊಂಡು ಬಂದಿದೆ. ಸರ್ಕಾರ ಇದನ್ನು 1979ರಲ್ಲಿ ತನ್ನ ಸ್ವಾಮ್ಯಕ್ಕೆ ತೆಗೆದುಕೊಂಡಿದೆ. ಇದನ್ನು 1988ರಲ್ಲಿ ಕೆ.ಎಸ್.ಟಿ.ಗೆ ಎಂಟ್ರಸ್ಟ್ ಮಾಡಿ ಅಲ್ಲಿಂದ ಇದು ಕೆಲಸ ಮಾಡಿಕೊಂಡು ಬಂದಿದೆ. ಇದರಲ್ಲಿ ಸುಮಾರು 7 ಕೋಟಿ ರೂಪಾಯಿಗಳಷ್ಟು ನಷ್ಟ ಆಗಿದೆ ಇದಕ್ಕೆ ಪ್ರತಿ ತಿಂಗಳು ವರ್ಕಿಂಗ್ ಕ್ಯಾಪಿಟಲ್ 9 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಅಲ್ಲಿ ಮೇಜರ್ ಆಗಿ ತೊಂದರೆ ಇರುವುದು ಉತ್ಪಾದನೆ ಅದರ ಜೊತೆಗೆ ಪವರ್ ತೊಂದರೆ ಬೇರೆ ಇದೆ. ನಾನಾ ಸಮಸ್ಯೆಗಳು ಇದರಲ್ಲಿ ಇದೆ. ಮಾನ್ಯ ಸದಸ್ಯರಿಗೂ ಇದು ಗೊತ್ತಿದೆ. ಅಲ್ಲಿ ಬಹಳ ಹಳೆಯ ಮೆಷನರಿ ಇದೆ. ಆದರಿಂದ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ವರ್ಕಿಂಗ್ ಕ್ಯಾಪಿಟಲ್ ಇಲ್ಲ. ಆದ್ದರಿಂದ ಇದು ಈಗ ಬಿ.ಐ.ಎಫ್.ಆರ್ ಮುಂದೆ ಹೋಗಿದೆ. ನಮ್ಮ ಕೈಯಲ್ಲಿ ಇಲ್ಲ.

ಅವರು ಕೇಳಿದ ಹಾಗೆ ನಾವು ಪುನಶ್ಚೇತನ ಮಾಡುವುದಿಲ್ಲ. ನಾನು ಈ ಮಾತನ್ನು ಖಚಿತವಾಗಿ ಹೇಳುತ್ತಿದ್ದೇನೆ. ಪುನಶ್ಚೇತನಗೊಳಿಸುವಂತಹ ಯಾವುದೇ ಕಾರ್ಯಕ್ರಮ ನಮ್ಮ ಮುಂದೆ ಇಲ್ಲ. ಮಾರಾಟ ಮಾಡುವಂತಹ ಚಿಂತನೆ ಇದೆ ಅದನ್ನು ಇನ್ನೂ ಸರ್ಕಾರ ನಿರ್ಧಾರ ಮಾಡಿಲ್ಲ. ಹಳೆಯ ಮೆಕ್ಷಿನ್ಸ್‌ಗಳನ್ನು ಮಾರಾಟ ಮಾಡಬೇಕೆನ್ನುವ ನಿರ್ಧಾರ ತೆಗೆದುಕೊಂಡಿದ್ದೇವೆ. ಇದು ಅಲ್ಲಿನ ಪರಿಸ್ಥಿತಿ.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಬೇರೆ ಜವಳಿ ಗಿರಣಿಗಳಿಗೆ ನಾವು ಪರವಾನಿಗೆಯನ್ನು ಕೊಡುತ್ತೇವೆ. ಈಗ ಹಾಲಿ ಇರುವ ಜವಳಿ ಗಿರಣಿಯನ್ನು ಮುಚ್ಚುವಂತಹ ಪರಿಸ್ಥಿತಿಯನ್ನು ಸರ್ಕಾರ ತಂದುಕೊಂಡಿದೆ. ಅಲ್ಲಿ ಸುಮಾರು 50 ಎಕರೆಯಲ್ಲಿ ಈ ಗಿರಣಿ ಇದೆ. ಈ ಜಮೀನು ಬಹಳ ಬೆಲೆ ಬಾಳುವಂತಹ ಜಮೀನು. ಅಲ್ಲಿ 20 ಎಕರೆ ಜಮೀನು ವೇಸ್ಟ್ ಲ್ಯಾಂಡ್ ಇದೆ. ಆ ಜಮೀನನ್ನು ಮಾರಾಟ ಮಾಡಿದರೆ ಸುಮಾರು 10 ಕೋಟಿ ರೂಪಾಯಿಗಳಷ್ಟು ಹಣ ಬರುತ್ತದೆ. ಆ ಹಣವನ್ನು ವರ್ಕಿಂಗ್ ಕ್ಯಾಪಿಟಲ್‌ಗೆ ಹಾಕಿ ಹೊಸ ಮೆಷಿನ್ಸ್ ತೆಗೆದುಕೊಂಡು ಬಂದು ಪುನಶ್ಚೇತನ ಮಾಡಿದರೆ ಮತ್ತೆ ಆ ಗಿರಣಿ ಪುನರಾರಂಭ ಮಾಡುವುದಕ್ಕೆ ಸಾಧ್ಯ ಇದೆ. ಈ ಸಾಧಕ ಬಾಧಕವನ್ನು ಸರ್ಕಾರ ಆಲೋಚನೆ ಮಾಡಬೇಕೇ ಹೊರತು ಆ ಜವಳಿ ಗಿರಣಿಯನ್ನು ಮುಚ್ಚುವಂತಹ ಕೆಲಸ ಮಾಡಬಾರದು. ಅಲ್ಲಿ ಕೆಲಸ ಮಾಡುವಂತಹ ನೌಕರವರ್ಗವನ್ನು ಸರ್ಕಾರ ಉಳಿಸಬೇಕೆಂದು ನಾನು ಸರ್ಕಾರದ ಮೇಲೆ ಒತ್ತಾಯ ತರುತ್ತೇನೆ. ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ನಾನು ಕೇಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಇದಕ್ಕೆಲ್ಲಾ ಕಾರ್ಮಿಕರೇ ಕಾರಣ. ಮತ್ತು ಉತ್ಪಾದನಾ ದೃಷ್ಟಿಯಿಂದ ಅಲ್ಲಿ ಇರುವ ಮೆಷಿನ್ಸ್ ಬಹಳ ಹಳೆಯದಾಗಿವೆ. ಇವತ್ತು ಮಾನ್ಯ ಸದಸ್ಯರು ಅಲ್ಲಿರುವ ಅಸ್ಸೆಟ್ಸ್ ಬಗ್ಗೆ ಹೇಳುತ್ತಿದ್ದಾರೆ. ಆ ಸ್ಸೆಟ್ಸ್ ಬಹಳ ಬೆಲೆ ಆಗುತ್ತದೆ ಅದನ್ನು ಮಾರಾಟ ಮಾಡಿ ಪುನಶ್ಚೇತನ ಮಾಡಿ ಎಂದು ಹೇಳುತ್ತಿದ್ದಾರೆ. ಈ ವಿಷಯ ಈಗ ಬಿ.ಐ.ಎಫ್.ಆರ್ ಮುಂದೆ ಇದೆ. ಅವರು ಇವೆಲ್ಲವನ್ನೂ ತೆಗೆದುಕೊಂಡು ಏನು ಮಾಡಬೇಕೆಂದು ತೀರ್ಮಾನ ಕೊಡುತ್ತಾರೆ. ಆ ಮೇಲೆ ಸರ್ಕಾರ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತದೆ. ಅಲ್ಲಿನ ನೌಕರರಿಗೆ ವೇತನ ಕೊಡುವ ದೃಷ್ಟಿಯಿಂದ ಮಾನ್ಯ ಸದಸ್ಯರು ಕೇಳಿದ್ದಾರೆ. ಜೂನ್ 1996ರವರೆಗೂ ಅಲ್ಲಿನ ನೌಕರರಿಗೆ ವೇತನವನ್ನು ಕೊಟ್ಟಿದ್ದಾರೆ. ಬಿ.ಐ.ಎಫ್,ಆರ್, ನವರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ, ಆ ರೀತಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.